# ಶಾಸ್ತ್ರೀಯ ಕನ್ನಡ ಅಧ್ಯಯನದ ಹೊಸ ಸಾಧ್ಯತೆಗಳು

## ಸ್ಥಳ : ಭಾರತೀಯ ಭಾಷಾ ಸಂಸ್ಥಾನ, ಮೈಸೂರು

## ದಿನಾಂಕ : ನವೆಂಬರ್ ೧೭ ರಿಂದ ೨೧, ೨೦೧೭ (೫ ದಿನಗಳು)

## ಸಂಚಾಲಕರು : ಡಾ. ಚಲಪತಿ ಆರ್, ಸೀನಿಯರ್ ಫೆಲೋ



ಯುವ ಸಂಶೋದಕರು ಮತ್ತು ಕನ್ನಡ ಅಧ್ಯಾಪನದಲ್ಲಿ ತೊಡಗಿರುವವರಿಗಾಗಿ ಈ ಕಮ್ಮಟ ಏರ್ಪಡಿಸಲಾಗಿತ್ತು. ಕನ್ನಡ ಪ್ರಾಚೀನ ಪಠ್ಯಗಳ ಅಧ್ಯಯನ ಕುಂಠಿತಗೊಂಡಿದೆಯೇ? ಪ್ರಾಚೀನ ಕನ್ನಡದ ಗುರುತುಗಳಲ್ಲಿ ಕೆಲಸ ಮಾಡುವ ಮಹತ್ವದ ವಿದ್ವಾಂಸರು ಇವತ್ತಿನ ಹೊಸ ತಲೆಮಾರುಗಳಲ್ಲಿ ಕಾಣಿಸುತ್ತಿಲ್ಲವೇಕೆ? ಎನ್ನುವ ಪ್ರಶ್ನೆಗಳನ್ನಿರಿಸಿಕೊಂಡು, ಕನ್ನಡ ಅಧ್ಯಾಪನ ಮತ್ತು ಅಧ್ಯಯನಗಳಲ್ಲಿ ಪ್ರಾಚೀನ ಸಾಹಿತ್ಯದ ವಿದ್ವತ್ತಿನ ಕುರಿತಾಗಿ ಹೆಚ್ಚೆಚ್ಚು ತೊಡಗಿಕೊಳ್ಳುವಂತೆ ಮಾಡುವ ಗುರಿಯ ಕಮ್ಮಟ ಇದಾಗಿತ್ತು. ಪ್ರಾಚೀನ ಸಾಹಿತ್ಯ, ಭಾಷೆ, ಶಾಸನ, ಶಾಸ್ತ್ರ, ಜಾನಪದ ಅರಿವು, ಧರ್ಮ, ಪುರಾಣ, ಜಾನಪದ ಮತ್ತು ಶಿಷ್ಟ ಅಧ್ಯಯನಗಳ ಮೂಲಕ ಕನ್ನಡ-ಕರ್ನಾಟಕದ ಪ್ರಾಚೀನ ಸಾಂಸ್ಕೃತಿಕ ನಡೆಗಳಲ್ಲಿ ಆಸಕ್ತಿ ವಹಿಸುವುದು, ಅರಿಯುವುದು ಹೇಗೆ? ಈ ಕುರಿತಾಗಿ ಕನ್ನಡದ ಹಿರಿಯ ವಿದ್ವಾಂಸರು ಏನೆಲ್ಲ ಮಾಡಿದ್ದಾರೆ, ಎಂತಹ ದಾರಿಗಳನ್ನು ತೋರಿಸಿದ್ದಾರೆ, ಅದನ್ನು ಇವತ್ತಿಗೆ ಬೇಕಾದಂತೆ ಮರು ರೂಪಿಸಿಕೊಳ್ಳುವುದು ಹೇಗೆ? ಎನ್ನುವ ನಡೆಯಲ್ಲಿ ಯೋಜಿಸಿದ ಕಮ್ಮಟ ಇದು. ಈ ನಿಟ್ಟಿನಲ್ಲಿ 'ಹಳಗನ್ನಡ ಸಾಹಿತ್ಯಾಧ್ಯಯನದ ಪರಿಕರಗಳು, ಪ್ರಾಚೀನ ಶಾಸನಾಧ್ಯಯನದ ದಾರಿಗಳು, 'ಪ್ರಾಚೀನ ಜೈನ ಕಾವ್ಯಗಳ ಅಧ್ಯಯನದ ಪ್ರಸ್ತುತತೆ, ಜಾನಪದ ನೆಲೆಯಲ್ಲಿ ಪ್ರಾಚೀನ ಕಾವ್ಯಗಳ ಅಧ್ಯಯನ, ವಚನ ಸಾಹಿತ್ಯಾಧ್ಯಯನ ಸಾಧ್ಯತೆಗಳು, ದಾಸ ಸಾಹಿತ್ಯಾಧ್ಯಯನದ ಸಾಧ್ಯತೆಗಳು, ಪ್ರಾಚೀನ ಸಾಹಿತ್ಯಾಧ್ಯಯನ-ಮಹಿಳಾ ನೆಲೆಗಳು, ಮೊದಲಾಗಿ ಚರ್ಚೆಗಳು ನಡೆದವು. ಜಾನಪದ ಮತ್ತು ಪ್ರಾಚೀನ ಕಾವ್ಯಗಳ ಗಮಕವನ್ನೂ ಏರ್ಪಡಿಸಲಾಗಿತ್ತು. ನಾಡಿನ ವಿದ್ವಾಂಸರಾದ ಪ್ರೊ.ಡಿ.ಕೆ.ರಾಜೇಂದ್ರ, ಪ್ರೊ. ಸಿಪಿಕೆ, ಪ್ರೊ.ಎನ್.ಎಸ್.ತಾರಾನಾಥ್, ಪ್ರೊ, ದೇವರ ಕೊಂಡಾರೆಡ್ಡಿ, ಪ್ರೊ.ಪಿ.ಕೆ.ರಾಜಶೇಖರ, ಪ್ರೊ.ಬಿ.ಶಿವರಾಮಶೆಟ್ಟಿ,

ಪ್ರೊ.ಲತಾ ಮೈಸೂರು, ಪ್ರೊ.ಶುಭಚಂದ್ರ, ಪ್ರೊ.ಎನ್.ಆರ್.ಲಲಿತಾಂಬ ಮೊದಲಾದ ವಿದ್ವಾಂಸರು ಭಾಗವಹಿಸಿ ಬೌದ್ಧಿಕ ಸಂಪನ್ಮೂಲವನ್ನು ಒದಗಿಸಿದರು. ಇವರೊಂದಿಗೆ ಭಾರತೀಯ ಭಾಷಾ ಸಂಸ್ಥಾನದ ಡಿ.ಜಿ.ರಾವ್, ಪ್ರೊ.ರಾಮಮೂರ್ತಿ ಇವರು ಪಾಲ್ಗೊಂಡಿದ್ದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ಎನ್.ಎಮ್. ತಳವಾರ ಅವರು ಕಮ್ಮಟದ ನಿರ್ದೇಶಕರಾಗಿದ್ದರು.

New Possibilities in Classical Kannada Studies
Location : State of Indian Language, Mysore
Date : November 17 to 21, 2017 (5 days)
Moderator: Dr. Chalapati R, Senior Fellow



This workshop was organized for young researchers and those involved in teaching Kannada. Ancient cultural movements of Kannada through ancient literature, language, inscriptions, Shastaç, folklore, religion, mythology, folklore and culture studies were all discussed . The tools of ``Halagannada literature study," Ways of ancient literature study, relevance of study of ancient Jain poetry, study of ancient poetry in folk setting, possibilities of vachana literature study, possibilities of dasa literature study, ancient literature-women bases, were first discussed. Gamaka of ancient poetry, folklore was also conducted. scholars like Prof. D.K. Rajendra, Prof. Scholars like CPK, Prof. NS Taranath, Prof. Devara Kondareddy, Prof. PK Rajasekhara, Prof. B. Shivaramshetty, Prof. Latha Mysore, Prof. Subhachandra, Prof. NR Lalithamba participated and provided intellectual resources. D. G. Rao, Prof. Ramamurthy of Central Institute of Indian Languages participated. Kuvempu Institute of Kannada Studies Prof. N.M. Talwar presided over.